# ಕುವೆಂಪು ಅವರ ಬಗೆಗಿನ ಕೆಲವು ನೆನಪುಗಳು

● ದೇಜಗೌ

-೧-

ಕುವೆಂಪು ಸಾಮಾನ್ಯವಾಗಿ ಕುಟೀಚಕರು; ಹೊರಗೆಲ್ಲಿಯೂ ಹೋದವರಲ್ಲ. ಜ್ಞಾನಪೀಠ ಪ್ರಶಸ್ತಿ ಬಂದಾಗ, ತಮ್ಮ ಗೈರುಹಾಜರಿಯಲ್ಲಿ ಅದನ್ನು ತಮಗೆ ನೀಡಬೇಕೆಂಬ ಆಶಯವನ್ನವರು ವ್ಯಕ್ತಪಡಿಸಿದರು. ಆದರಿಂದ ಸಾಹು ಜೈನ್ ಟ್ರಸ್ಟಿನ ಪದಾಧಿಕಾರಿಗಳಿಗೆ ತುಂಬ ಅಸಮಾಧಾನವಾಯಿತು. ನಾಡಿನ ಮಹಾ ವಿದ್ವಾಂಸರಾದ ಡಾ. ಎ.ಎನ್. ಉಪಾಧ್ಯೆ ಮತ್ತು ಟ್ರಸ್ಟಿನ ಕಾರ್ಯದರ್ಶಿಗಳು ಖುದ್ದಾಗಿ ಕುವೆಂಪು ಅವರನ್ನು ಭೇಟಿ ಮಾಡಿ "ಟ್ರಸ್ಟಿನ ನಿಯಮಗಳ ಪ್ರಕಾರ ಗೈರುಹಾಜರಿಯಲ್ಲಿ ಪ್ರಶಸ್ತಿ ನೀಡಲಾಗದು. ಅದೂ ಅಲ್ಲದೆ, ನೀವು ಬರದಿದ್ದಾಗ, ನಿಮ್ಮನ್ನು ನೋಡುವ, ನಿಮ್ಮೊಡನೆ ಮಾತಾಡುವ ಅವಕಾಶ ದಾನಿಗಳಿಗೆ ತಪ್ಪಿಹೋಗುತ್ತದೆ. ನಿಮ್ಮ ಜತೆಯಲ್ಲಿ ಎಷ್ಟು ಜನರನ್ನಾದರೂ ಕರೆತನ್ನಿ. ಎಲ್ಲರಿಗೂ ಪ್ರಯಾಣಭತ್ಯೆಯಿಂದ ಹಿಡಿದು ಎಲ್ಲ ಅನುಕೂಲಗಳನ್ನು ಕಲ್ಪಿಸುತ್ತೇವೆ. ಅಲ್ಲಿಗೆ ಬಂದನಂತರ, ಕಾಶಿ, ಪ್ರಯಾಗ, ಬದರಿ ಎಲ್ಲಿಗೆ ಬೇಕಾದರೂ ಕರೆದೊಯ್ಯುವ ಏರ್ಪಾಡು ಮಾಡುತ್ತೇವೆ" ಎಂದವರು ಗೋಗರೆದು, ಕವಿಗಳ ಒಪ್ಪಿಗೆ ಪಡೆದು ಸಂತೋಷದಿಂದ ತೆರಳುತ್ತಾರೆ.

ದೆಹಲಿಗೆ ಹೋದನಂತರ ಶ್ರೀಮತಿ ರಮಾಜೈನ್ ಮೊದಲುಗೊಂಡು ಟ್ರಸ್ಟಿನ ಎಲ್ಲ ಪದಾಧಿಕಾರಿಗಳೂ ಕವಿ ಪರಿವಾರವನ್ನು ಏನೂ ಕೊರತೆಯಾಗದಂತೆ ನೋಡಿಕೊಳ್ಳುತ್ತಾರೆ. ಪ್ರಶಸ್ತಿ ಪ್ರದಾನ ಸಮಾರಂಭ ಅದ್ದೂರಿಯಿಂದ ನಡೆಯುತ್ತದೆ. ಎಲ್ಲ ಮುಗಿದನಂತರ ಕೆಲವು ಪ್ರೇಕ್ಷಣೀಯ ಸ್ಥಳಗಳಿಗೆ ಅವರನ್ನು ಕರೆದೊಯ್ಯುವುದಾಗಿ ಉದಾರ ಹೃದಯದ ಸುಸಂಸ್ಕೃತ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಒತ್ತಾಯ ಮಾಡುತ್ತಾರೆ. ಆಗ ಕುವೆಂಪು ಅವರು ನೀಡಿದ ಉತ್ತರವಿದು: "ನನಗೆಲ್ಲಿಯೂ ಹೋಗುವ ಇಚ್ಛೆಯಿಲ್ಲ. ನಾನಿಲ್ಲಿರುವ ತನಕ ದಿನಕ್ಕೊಮ್ಮೆಯಾದರೂ ಶ್ರೀರಾಮಕೃಷ್ಣಾಶ್ರಮಕ್ಕೆ ಭೇಟಿ ಕೊಟ್ಟು ಬರಬೇಕಾಗಿದೆ." ಎರಡು ದಿನ ಸಂಜೆಯ ವೇಳೆ, ಆಶ್ರಮಕ್ಕೆ ಹೋಗಿ, ಸ್ವಾಮಿಗಳನ್ನು ಮಾತಾಡಿಸಿ, ಪೂಜಾ ಮಂದಿರದಲ್ಲಿ ಪರಮಹಂಸರ ವಿಗ್ರಹದ ಮುಂದೆ ೧೦-೧೫ ನಿಮಿಷ ಧ್ಯಾನಮಗ್ನರಾಗಿ ಕುಳಿತಿದ್ದು, ಎದ್ದು ಬರುತ್ತಾರೆ. ಅವರ ಪಾಲಿಗೆ ಶ್ರೀರಾಮಕೃಷ್ಣಾಶ್ರಮವೇ ಸಕಲ ತೀರ್ಥಕ್ಷೇತ್ರಗಳ ಸರಿಸಮ.



-೨-

ಒಮ್ಮೆ ಬೆಂಗಳೂರಿಗೆ ಹೋಗುತ್ತಿದ್ದಾಗ, ಮಂಡ್ಯದಲ್ಲಿ ರಸ್ತೆ ದಾಟುತ್ತಿದ್ದ ಬಡ ಹಳ್ಳಿಗನೊಬ್ಬ ಕುಲಪತಿ ಕುವೆಂಪು ಅವರ ಕಾರಿಗೆ ಅಡ್ಡವಾಗುತ್ತಾನೆ. ಕಾರು ಅವನನ್ನು ದೂರಕ್ಕೆಸೆದಾಗ, ಅವನ ಪಕ್ಕೆಲುಬು ಮುರಿದದ್ದಲ್ಲದೆ ಮೂಗು ಬಾಯಿಗಳಿಂದ ರಕ್ತವೊಸರುತ್ತದೆ. ಕೂಡಲೆ ಕಾರು ನಿಲ್ಲಿಸುವಂತೆ ಕುವೆಂಪು ಚಾಲಕನಿಗೆ ಆಜ್ಞೆ ಮಾಡುತ್ತಾರೆ. ಜನ ಮುತ್ತಿಕೊಂಡು ಬಾಯಿಗೆ ಬಂದಂತೆ ಬಯ್ಯುತ್ತಾರೆ. ಕಾರು ಕುವೆಂಪು ಅವರದೆಂದು ತಿಳಿದಾಗ, ಜನ ಮಂತ್ರಮುಗ್ಧರಾದವರಂತೆ ಒಳಗಿದ್ದ ಕುವೆಂಪು ಅವರ ಕಡೆಗೆ ಭಕ್ತಿ ಗೌರವಗಳಿಂದ ಕಣ್ಣು ಹಾಯಿಸುತ್ತಾರೆ. ಕೆಲವರು ಅಪಘಾತಕ್ಕೆ ಗುರಿಯಾದ ವ್ಯಕ್ತಿಯನ್ನು ಪಕ್ಕದ ಆಸ್ಪತ್ರೆಗೆ ಸಾಗಿಸುತ್ತಾರೆ. ದಿಗ್ಭ್ರಮೆಗೊಂಡ ಕುವೆಂಪು ಅವರನ್ನು ಎ.ಸಿ. ಮಾದೇಗೌಡರ ಮನೆಗೆ ಕರೆದೊಯ್ದರು. ಅಲ್ಲಿಗೆ ಪೋಲೀಸಿನವರು ಬಂದರು. ತಪ್ಪು ಚಾಲಕನದಲ್ಲ, ಆ ದುರ್ದೈವಿಯದೆಂದು ಸುತ್ತ ಮುತ್ತಣವರ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. ಒಂದೆರಡು ಗಂಟೆಯನಂತರ ಕುವೆಂಪು ಆಸ್ಪತ್ರೆಗೆ ಹೋಗಿ, ಅಪಘಾತವಾದ ವ್ಯಕ್ತಿಯನ್ನು ನೋಡಿಕೊಂಡು, ಅವನ ವೈದ್ಯೋಪಚಾರದ ಖರ್ಚನ್ನು ತಾವೇ ವಹಿಸಿ

ಪ್ರೊ. ದೇಜಗೌ ಎಂದೇ ಜನಪ್ರಿಯರಾಗಿರುವ ಶ್ರೀಯುತ ಡಿ.ಜವರೇಗೌಡರು ನಾಡಿನ ಹಿರಿಯ ಸಾಹಿತಿಗಳಲ್ಲಿ ಅಗ್ರಮಾನ್ಯರು. ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳು.

ಕೊಳ್ಳುವುದಾಗಿ ವೈದ್ಯಾಧಿಕಾರಿಗೆ ತಿಳಿಸುತ್ತಾರೆ. ಆ ವ್ಯಕ್ತಿ ಸಂಪೂರ್ಣ ಗುಣಮುಖನಾದ ನಂತರ 'ಉದಯರವಿ' ಗೆ (ಕುವೆಂಪು ಅವರ ನಿವಾಸ) ಬಂದು ಕುವೆಂಪು ಅವರಿಗೆ ನಮಸ್ಕರಿಸಿ ಕೆಲಸ ಕೇಳುತ್ತಾನೆ. ಆ ದಿನವೇ ಕುಲಪತಿ ಕುವೆಂಪು ಅವನನ್ನು ನಾಲ್ಕನೆಯ ದರ್ಜೆಯ ಹುದ್ದೆಗೆ ತೆಗೆದುಕೊಂಡು, ಮಂಡ್ಯದ ಕಾಲೇಜಿಗೆ ನೇಮಿಸುತ್ತಾರೆ. ಅವನು ದಲಿತ. ಕುವೆಂಪು ಅವರ ಮಾನವೀಯತೆಗೆ ಇದೊಂದು ನಿದರ್ಶನ.

-೩-

ಕುವೆಂಪು ಅವರು ಹೇಗೆ ತಮ್ಮ ವೈಚಾರಿಕ ನಿಷ್ಠೆಯನ್ನು ಯಾವ ಮುಚ್ಚುಮರೆಯೂ ಇಲ್ಲದೆ ವ್ಯಕ್ತಪಡಿಸುತ್ತಿದ್ದರು ಎಂಬ ಒಂದು ರೋಚಕ ಘಟನೆ ಉಲ್ಲೇಖಯೋಗ್ಯ.

ಆಗ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರು ಬುದ್ಧಿಜೀವಿಗಳೆಂದೂ ಜ್ಞಾನಸಂಪನ್ನರೆಂದೂ, ವಿವೇಕಿಗಳೆಂದೂ, ಶ್ರೇಷ್ಠ ಆಡಳಿತಗಾರರೆಂದೂ ಹೆಸರುವಾಸಿಯಾಗಿದ್ದರು. ಅಂಥವರೂ ಸಹ ಒಮ್ಮೊಮ್ಮೆ ಔಚಿತ್ಯ ವಿವೇಕವನ್ನು ಮರೆತು, ಸಮತೂಕ ಕಳೆದುಕೊಳ್ಳುತ್ತಿದ್ದರು. ಇಂಥದೊಂದು ಪ್ರಸಂಗ ನಡೆದದ್ದು, ಬೆಂಗಳೂರಿನ ಒಕ್ಕಲಿಗ ಸಂಘದ ವಿದ್ಯಾರ್ಥಿನಿಲಯದ ವಾರ್ಷಿಕೋತ್ಸವದ ಸಮಯದಲ್ಲಿ. ಅಂದಿನ ಸಭೆಗೆ ಮುಖ್ಯಮಂತ್ರಿ ಹನುಮಂತಯ್ಯನವರು ಅಧ್ಯಕ್ಷರಾಗಿದ್ದರು. ಕುಲಪತಿ ಕುವೆಂಪು ಮುಖ್ಯ ಅತಿಥಿಗಳಾಗಿದ್ದರು. ಕೆಲವು ದಿನಗಳ ಹಿಂದೆ ವಿನೋಬಾಜಿ ಮೈಸೂರಿಗೆ ಬಂದಿದ್ದಾಗ, 'ಉದಯರವಿ'ಗೂ ಹೋಗಿದ್ದರು. ಆ ನೆನಪು ಕವಿಗಳ ಮನಸ್ಸಿನಲ್ಲಿ ಹಸುರಾಗಿ ಇದ್ದುದರಿಂದಲೋ ಏನೋ, ಅವರು ತಮ್ಮ ಭಾಷಣದಲ್ಲಿ ವಿನೋಬಾರ ಸಂದೇಶವನ್ನೂ, ಅವರ ಮಹತ್ತ್ವವನ್ನೂ, ಭೂದಾನ ಯಜ್ಞದ ಪರಿಣಾಮವನ್ನೂ ವಿಶದಪಡಿಸಿದರು.

ಹನುಮಂತಯ್ಯನವರಿಗೆ ಏಕೊ ಏನೊ ವಿನೋಬಾ ಅವರ ಬಗ್ಗೆ ಒಳ್ಳೆಯ ಅಭಿಪ್ರಾಯವಿರಲಿಲ್ಲ. ಭೂದಾನ ಯಜ್ಞಾಂದೋಲನದ ಯಶಸ್ಸಿನ ಬಗ್ಗೆ ಅವರಿಗೆ ಸಂದೇಹವಿದ್ದಿರಬಹುದು. ಸೂಕ್ತವಾದ ರೀತಿಯಲ್ಲಿ ಆ ರಾಜನೀತಿ ನಿಪುಣರು ತಮ್ಮ ಸಂದೇಹವನ್ನು ವ್ಯಕ್ತಪಡಿಸಬಹುದಿತ್ತು. ಅಂಥ ಸಂದರ್ಭದಲ್ಲಿ ಕುವೆಂಪು ಅವರ ಮನಸ್ಸಿಗೆ ಆಘಾತವಾಗುತ್ತಿರಲಿಲ್ಲ. ಆದರೆ ಮುಖ್ಯಮಂತ್ರಿಗಳು ವಿನೋಬಾರವರ ಆಹಾರದ ಬಗ್ಗೆ, ಅವರ ಉಪದೇಶದ ಬಗ್ಗೆ ಟೀಕಾಸ್ತ್ರಗಳನ್ನು ಪ್ರಯೋಗಿಸಲು ಯತ್ನಿಸಿದಾಗ, ವಿನೋಬಾರವರಲ್ಲಿ ಪೂಜ್ಯ ಭಾವ ಇರಿಸಿಕೊಂಡಿದ್ದ ಕುವೆಂಪು ಅವರು ಸುಮ್ಮನಿರಲಾದೀತೆ? ಜವಹರಲಾಲ್ ನೆಹರೂ ಅವರ ಗೌರವಕ್ಕೆ ಪಾತ್ರರಾಗಿದ್ದ, ಮಹಾತ್ಮರ ವಿಶ್ವಾಸವನ್ನು ಗಳಿಸಿದ್ದ, ಇಡೀ ದೇಶವೇ ಮೆಚ್ಚಿಕೊಂಡಿದ್ದ ಸಂತಸದೃಶವ್ಯಕ್ತಿಯೊಬ್ಬರ ಬಗ್ಗೆ ಲಘುವಾಗಿ ಯಾರೇ ಮಾತಾಡಲಿ, ಕುವೆಂಪು ಅವರಂಥ ದಾರ್ಶನಿಕ ಕವಿ ಸಹಿಸಲಾರರು. ಅಂಥ ಟೀಕೆ ಯುವಕರ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರಬಹುದೆಂಬ ಶಂಕೆಯೂ ಅವರಿಗಿತ್ತು.

ಪ್ಲೇಟೋ ಅರಿಸ್ಟಾಟಲ್ ಪೇಯಿನ್ ಕೌಟಿಲ್ಯ ವ್ಯಾಸ ವಾಲ್ಮೀಕಿಯರ ಕೃತಿಗಳನ್ನು ಸದಾ ಪಠಿಸುತ್ತಿದ್ದ ಅಪೂರ್ವ ಚಾಣಾಕ್ಷ ರಾಜಕಾರಣಿ ಹನುಮಂತಯ್ಯನವರು ಆ ಹೊತ್ತು ತಮ್ಮ ಭಾಷಣದಲ್ಲಿ ದಾರಿ ತಪ್ಪಿದ್ದು ವಿಧಿಯ ಕೈವಾಡವೆಂದೇ ತೋರುತ್ತದೆ. "ವಿನೋಬಾಜಿ ವಿಶ್ವಾರಾಧ್ಯ ವ್ಯಕ್ತಿ. ಅವರ ಸಾಧನೆ ಸಿದ್ಧಿಗಳಲ್ಲಿ ನಿಮಗೆ ನಂಬಿಕೆಯಿಲ್ಲವಾದರೆ, ಆ ವಿಷಯವನ್ನು ಬಿಟ್ಟು ಬೇರೆ ವಿಷಯವನ್ನೆತ್ತಿಕೊಳ್ಳಿ" ಎಂದು ಕುವೆಂಪು ಸಲಹೆ ಮಾಡಿದರು. "ನಾನು ಈ ಸಭೆಯ ಅಧ್ಯಕ್ಷ. ನನಗೆ ಅಭಿಪ್ರಾಯ ಸ್ವಾತಂತ್ರ್ಯವಿದೆ. ಅಧ್ಯಕ್ಷ ಭಾಷಣಕ್ಕೆ ತಡೆಯೊಡ್ಡಬಾರದು" ಎಂದು ಸ್ವಾಭಿಮಾನಿ ಕೆಂಗಲ್ ಪಟ್ಟು ಹಿಡಿದರು. "ಹಾಗಾದರೆ, ನನಗೂ ವ್ಯಕ್ತಿಸ್ವಾತಂತ್ರ್ಯವಿದೆ. ನಾನು ಇಲ್ಲಿಂದ ನಿರ್ಗಮಿಸುತ್ತೇನೆ. ಅನಂತರ ನೀವು ಏನು ಬೇಕಾದರೂ ಮಾತಾಡಿಕೊಳ್ಳಿ" ಎಂದು ಸಭೆಗೆ ನಮಸ್ಕರಿಸಿ, ಕುವೆಂಪು ಸಭಾಂಗಣದಿಂದ ನಿರ್ಗಮಿಸಿದರು. ಸಭೆಯಲ್ಲಿ ಸ್ಮಶಾನಮೌನ ತುಳುಕಾಡಿತು. ಭೂತ ಹಿಡಿದಂತೆ ಸಭಿಕರು ನಿಶ್ಶಬ್ದವಾಗಿ, ಬೆಪ್ಪರಂತೆ ಬೆರಗಾಗಿ ಮಿಳ್ಮಿಳನೆ ಕಣ್ಣುಬಿಡುತ್ತಿದ್ದರು.

ಹನುಮಂತಯ್ಯನವರೂ ಭಾಷಣಕ್ಕೆ ವಿರಾಮ ಹೇಳಿ ಹೊರಗೆ ಹೊರಡಲು ಸನ್ನದ್ಧರಾದರು. ಅವಸರದಿಂದ ವಂದನಾರ್ಪಣೆ ಮುಗಿಯಿತು. ಆ ದುರದೃಷ್ಟ ಪ್ರಸಂಗ ದಪ್ಪಕ್ಷರಗಳಲ್ಲಿ ಸುದ್ದಿಮಾಧ್ಯಮಗಳಲ್ಲಿ ಪ್ರಕಟವಾಗಬಾರದೆಂಬ ಆಶಯದಿಂದ ಮುಖ್ಯಮಂತ್ರಿಗಳ ಕಚೇರಿಯ ಜನ ಚುರುಕಾಗಿ ತಾವು ಕಂಡಿದ್ದ ಎಲ್ಲ ಉಪಾಯ ಹುನಾರುಗಳನ್ನೂ ಬಳಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆಗೆ ಒಂದು ವರ್ಷದ ಮಟ್ಟಿಗೆ ಮಾತ್ರವೆ ಕುವೆಂಪು ಆಗ ನೇಮಕಗೊಂಡಿದ್ದರೆಂಬುದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು. ಆ ವಿಷಯ ಕುವೆಂಪು ಅವರಿಗೆ ಮಾತ್ರವಲ್ಲ, ಎಲ್ಲ ಕನ್ನಡಿಗರಿಗೂ ಗೊತ್ತಿತ್ತು. ಕುವೆಂಪು ಅಧಿಕಾರಿಶಾಹಿಗೆ ಎಂದೂ ಸೊಪ್ಪುಹಾಕದೆ, ಸ್ವಾರ್ಥಕ್ಕಾಗಿ ನೀತಿನಿಯಮಗಳಿಗೆ ತರ್ಪಣ ಬಿಡದೆ, ವ್ಯಕ್ತಿಸ್ವಾತಂತ್ರ್ಯ ಗೌರವಗಳನ್ನು ಕಾಪಾಡಿಕೊಂಡಿದ್ದರು ಎಂಬುದಕ್ಕೆ ಹಲವು ನಿದರ್ಶನಗಳ ಪೈಕಿ ಇದೂ ಒಂದು.

ಆದರೆ ಹನುಮಂತಯ್ಯನವರು ಈ ಕಹಿಪ್ರಸಂಗವನ್ನು ಕೂಡಲೇ ಮರೆತರೆಂದು ತೋರುತ್ತದೆ. ಏಕೆಂದರೆ ಅವರನ್ನು ನಾನು ಭೇಟಿಮಾಡಿದಾಗ ಈ ವಿಷಯನ್ನವರು ಎತ್ತಲಿಲ್ಲ. ಕುವೆಂಪು ಸಹ ಅದನ್ನು ಮರೆತರು.

-೪-

ವಿಶ್ವವಿದ್ಯಾನಿಲಯಕ್ಕೆ ಯುಜಿಸಿ (ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ) ಅನುದಾನ ದೊರೆಯಬೇಕಾದರೆ,

ಅದು ಸ್ವಾಯತ್ತ ಸಂಸ್ಥೆಯಾಗಿರಬೇಕೆಂಬ ನಿಯಮವಿತ್ತು. ಸ್ವಾಯತ್ತತೆ ಪಡೆದಾಗ ವಿಶ್ವವಿದ್ಯಾನಿಲಯ ಬೃಹತ್ ಯೋಜನೆಯೊಂದನ್ನು ತಯಾರಿಸಿ, ಮಾನಸಗಂಗೋತ್ರಿಯಲ್ಲಿ ಸ್ನಾತಕೋತ್ತರ ಇಲಾಖೆಗಳನ್ನು ಪ್ರಾರಂಭಿಸುವ ಸೂಚನೆಯನ್ನು ನೀಡುತ್ತದೆ. ಪರಾಮರ್ಶೆಗೆ ಯುಜಿಸಿ ಚೇರ್ಮನ್ನರಾದ ದಕ್ಷ ಅಧಿಕಾರಿ ಶ್ರೀ ಸಿ.ಡಿ. ದೇಶಮುಖರೇ ಪತ್ನೀ ಸಮೇತರಾಗಿ ಮೈಸೂರಿಗೆ ಬರುತ್ತಾರೆ. ಅವರಿಗೆ ಬೃಂದಾವನದ ಹೋಟಲಿನಲ್ಲಿ ವಾಸ್ತವ್ಯಾನುಕೂಲವನ್ನು ಏರ್ಪಡಿಸಲಾಗಿತ್ತು. ದುರ್ದೈವದಿಂದ ಬಂದ ರಾತ್ರಿಯೇ ಅವರು ಜ್ವರದ ಕಾವಿನಿಂದ ನರಳುತ್ತಾರೆ. ಕುವೆಂಪು ಅವರೇ ದೇಶಮುಖರಿಗೆ ವೈದ್ಯೋಪಚಾರವನ್ನು ಒದಗಿಸಿದ್ದಲ್ಲದೆ, ಎರಡು ದಿನ ಬೆಳಗ್ಗೆ ಮತ್ತು ಅಪರಾಹ್ನ ಅವರ ಬಳಿಯಿದ್ದು, ಪರಸ್ಪರ ಕವಿತೆಗಳನ್ನು ವಾಚಿಸುತ್ತ, ಇಂಗ್ಲಿಷಿನಲ್ಲಿ ತಾತ್ಪರ್ಯವನ್ನು ವಿವರಿಸುತ್ತ, ಕಾಲ ನೂಕುತ್ತಾರೆ. "ಪುಟ್ಟಪ್ಪನವರೆ. ವೈದ್ಯೋಪಚಾರಕ್ಕಿಂತ ಕಾವ್ಯ ರಸಾಸ್ವಾದನೆಯಿಂದಾಗಿ ನಾನು ಬೇಗ ಗುಣಮುಖನಾದೆ. ನನಗೆ ಫ್ಲೂ ಬಂದದ್ದು ಒಳ್ಳೆಯದೇ ಆಯಿತು. ನಿಮ್ಮಂಥ ಮಹಾಕವಿಯೊಡನೆ, ದ್ರಷ್ಟಾರರೊಡನೆ ಎರಡು ದಿನ ಕಳೆದ ಕಾಲ ವ್ಯರ್ಥವಲ್ಲ. ಅದಕ್ಕಾಗಿಯೇ ನನಗೆ ಜ್ವರ ಬಂತೆಂದು ತೋರುತ್ತದೆ. ನೀವೇ ಹೇಳುವಂತೆ ಭಗವತ್ಕೃಪೆ ಕ್ಲೇಶರೂಪವಾಗಿಯೂ ಬರುತ್ತದೆಂಬುದು ನಿಜ" ಎಂದು ದೇಶಮುಖರು ತಮ್ಮ ಹರ್ಷವನ್ನು ವ್ಯಕ್ತಪಡಿಸುತ್ತಾರೆ. ಮಹಿಮೆ ಮಹಿಮೆಯನ್ನು ಗುರುತಿಸುತ್ತದೆಂಬುದಕ್ಕೆ ಇದೊಂದು ಉತ್ತಮ ನಿದರ್ಶನ.

ಕುವೆಂಪು ಅವರನ್ನು ನೆನೆದಾಗ ಅನೇಕ ಸ್ಮೃತಿದೃಶ್ಯಗಳು ಗೋಚರವಾಗಿ ನನ್ನ ಕಣ್ಣನ್ನು ಒದ್ದೆ ಮಾಡುತ್ತವೆ. ಈ ಒಂದೊಂದು ದೃಶ್ಯದಲ್ಲಿಯೂ ಅವರ ವ್ಯಕ್ತಿತ್ವದ ಹಲವು ಆಯಾಮಗಳು ವೇದ್ಯವಾಗುತ್ತವೆ. ಅವರ ಹತ್ತಿರದ ಇತರ ಶಿಷ್ಯರಲ್ಲಿಯೂ ಇಂಥವೇ ಹಲವು ನೆನಪುಗಳ ಖನಿಯಿರಬೇಕೆಂಬುದು ನನ್ನ ಎಣಿಕೆ.

✡

## ನಾ. ಕಸ್ತೂರಿಯವರ ನೆನಪು



ಆಶ್ರಮದ ಸಮಾರಂಭವೊಂದರಲ್ಲಿ ಕುವೆಂಪು

ಗೋಪಾಲ್ ಮಹಾರಾಜ್ (ಸ್ವಾಮಿ ಸಿದ್ಧೇಶ್ವರಾನಂದ), ಆಶ್ರಮದ ಅಧ್ಯಕ್ಷರು. ಅವರು ನನ್ನನ್ನು ಆಶ್ರಮದ ಕಾರ್ಯದರ್ಶಿಯನ್ನಾಗಿ ಮಾಡಿದರು. ಆಶ್ರಮಕ್ಕೆ ಬರುತ್ತಿದ್ದ ವಿದ್ಯಾರ್ಥಿಗಳ ಬಗ್ಗೆ ನಮಗೆ ವಿಶೇಷ ಪ್ರೀತಿ. ಅವರು ಇರುತ್ತಿದ್ದ ಹಾಸ್ಟೆಲುಗಳಿಗೆ, ಎಲ್ಲಾ ರೂಮುಗಳಿಗೆ ಸ್ವಾಮೀಜಿಯೂ ನಾನೂ ಆಗಾಗ ಹೋಗಿ ಬರುತ್ತಿದ್ದೆವು. ಅಂತಹದೊಂದು ಭೇಟಿಯ ಪ್ರಸಂಗವನ್ನಿಲ್ಲಿ ಹೇಳಬಯಸುತ್ತೇನೆ. ಏಕೆಂದರೆ ಆ ಭೇಟಿಯಿಂದ ಆ ವಿದ್ಯಾರ್ಥಿಯ ಮೇಲೆ, ಸ್ವಾಮೀಜಿಯ ಹಾಗೂ ನನ್ನ ಮೇಲೆ ಎಂತಹ ಉತ್ಕಟವಾದ ಪ್ರಭಾವವುಂಟಾಯಿತೆಂದು ವಿದಿತವಾಗುತ್ತದೆ.

"ಆಗಾಗ ಆಶ್ರಮಕ್ಕೆ ಬಂದು ತನ್ನ ಕವನಗಳನ್ನು ವಾಚಿಸಿ ಬೆರಗುಗೊಳಿಸುತ್ತಿದ್ದ ಪ್ರತಿಭಾವಂತ ವಿದ್ಯಾರ್ಥಿಯೊಬ್ಬ ಬಹಳ ಕಾಯಿಲೆಯಾಗಿ ಮಲಗಿದ್ದಾನೆಂದು ಕೇಳಿದೆವು. ಆತನ ಹೆಸರು ಕೆ.ವಿ.ಪುಟ್ಟಪ್ಪ. ಆತ ಧೂಳು, ಗದ್ದಲ ತುಂಬಿದ್ದ ಸಂತೆಪೇಟೆಯಲ್ಲಿ ಧಾನ್ಯದ ಗೋದಾಮಿನ ಮಹಡಿಯೊಂದರ ರೂಮಿನಲ್ಲಿ ವಾಸವಾಗಿದ್ದ. ಪುಟ್ಟಪ್ಪನನ್ನು ಕೂಡಲೆ ಆಸ್ಪತ್ರೆಗೆ ಸೇರಿಸಿದೆವು. ಚೇತರಿಸಿಕೊಂಡ ಮೇಲೆಯೂ ಆತನನ್ನು ಸಂತೆಪೇಟೆಯ ಮಹಡಿಗೆ ಕಳಿಸುವುದು ವಿಹಿತವಲ್ಲ, ಆತ ಖಾಯಮ್ಮಾಗಿ ಆಶ್ರಮದಲ್ಲೇ ಇದ್ದುಬಿಡಲಿ ಎಂದು ನಮ್ಮ ಆಶಯ. ಅವನನ್ನು ಕರೆದು, "ಮತ್ತೆ ಆ ಸಂತೆಪೇಟೆಯ ನರಕಕ್ಕೆ ಎಂದೂ ಕಾಲಿಡಬೇಡಪ್ಪಾ. ನೀನು ಇಲ್ಲೇ ಆಶ್ರಮದಲ್ಲಿ ಇದ್ದುಬಿಡು" ಎಂದು ಹೇಳಿ ಮನವೊಲಿಸಿ ಇರಿಸಿಕೊಂಡೆವು. ದೀಕ್ಷೆ ತೆಗೆದುಕೊಂಡ ಬ್ರಹ್ಮಚಾರಿಗಳು ಮತ್ತು ಸಾಧುಗಳು ಮಾತ್ರ ಆಶ್ರಮದಲ್ಲಿ ಇರಬಹುದಾಗಿತ್ತು. ದೀಕ್ಷೆ ಪಡೆಯದ ಹೊರಗಿನವನೊಬ್ಬನನ್ನು ಆಶ್ರಮದಲ್ಲಿರಿಸಿಕೊಳ್ಳುವುದು ಸರಿಯಲ್ಲ, ಅಲ್ಲಿನ ಪಾವಿತ್ರ್ಯಕ್ಕೆ ಚ್ಯುತಿ ಬರುತ್ತದೆ ಎಂದು ಅಲ್ಲಿನ ಕೆಲವರು ಗೊಣಗಿದರು. ಗೋಪಾಲ್ ಮಹಾರಾಜರು ಬೇಲೂರು ಮಠಕ್ಕೆ ಕಾಗದ ಬರೆದರು. ಪುಟ್ಟಪ್ಪ ಸಾಧಾರಣ ವ್ಯಕ್ತಿಯಲ್ಲ. ಭಾರತೀಯ ಸಂಸ್ಕೃತಿಯ ಭವ್ಯವಾದ ಭವನದ ಅತ್ಯಂತ ಭದ್ರವಾದ ಆಧಾರಸ್ತಂಭವಾಗುವ ಭವಿಷ್ಯವಿರುವ ಯುವಕ ಎಂದು ವಿವರಿಸಿದರು. ಈ ಉದಯೋನ್ಮುಖ ಕವಿ ತಾನು ಇಷ್ಟಪಡುವವರೆಗೆ ಅದೆಷ್ಟೇ ವರ್ಷಗಳಾಗಲಿ ಆಶ್ರಮದಲ್ಲಿ ಇರಲು ಆಶ್ರಯ ಕೊಟ್ಟೇ ತೀರಬೇಕೆಂಬ ನಿರ್ಧಾರವನ್ನು ಗೋಪಾಲ್ ಮಹಾರಾಜ್ ಮಾಡಿಕೊಂಡುಬಿಟ್ಟಿದ್ದರು. ಆಶ್ರಮದಲ್ಲಿದ್ದ ಕಾಲದಲ್ಲಿ ಪುಟ್ಟಪ್ಪ ಶ್ರೇಷ್ಠ ಕವಿಯಾಗಿ ವಿಕಾಸಗೊಂಡರು. ರಾಮಕೃಷ್ಣ-ವಿವೇಕಾನಂದರ ಗಾಢವಾದ ಪ್ರಭಾವಕ್ಕೊಳಗಾದ ಅವರು ವಿಶ್ವಪ್ರಜ್ಞೆಯನ್ನು ತಮ್ಮ ಅರಿವಿನಲ್ಲಿ ತುಂಬಿಸಿಕೊಂಡರು. ಅವರ ಸಾಹಿತ್ಯಸೇವಾಸಾಧನೆ ಸ್ವಾಮಿ ಸಿದ್ಧೇಶ್ವರಾನಂದರಿಗೂ ನನಗೂ ತುಂಬಾ ಸಂತೋಷವನ್ನುಂಟುಮಾಡಿತು.

—ನಾ. ಕಸ್ತೂರಿ ("ದೇವನೊಲಿದ ಜೀವ", ಭಾಗ-೧, ಪುಟ ೭೮-೮೦)

ಪ್ರಾಯೋಜಕರು : ಎಸ್.ಎನ್. ಇಂದಿರಾ ಬಾಯಿ, C/o ಶ್ರೀನಿವಾಸ್ ಎಂ,
I ಬ್ಲಾಕ್, I ಮೇನ್, ದೊಡ್ಡಬೊಮ್ಮಸಂದ್ರ, ಬೆಂಗಳೂರು –560 097